<u>ದಿನಾಂಕ **18.02.2026** ರಂದು ಪಿ.ಡಬ್ಲ್ಯೂ**-1**ರವರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.</u>

<u>ಪಾಟೀ ಸವಾಲುಃ **1**ನೇ ಪ್ರತಿವಾದಿ ಪರ ವಕೀಲರಿಂದಃ-</u>

(1ನೇ ಪ್ರತಿವಾದಿ ಪರ ಶ್ರೀ.ಎ ಪಿ ಕೆ ವಕೀಲರ ಪರವಾಗಿ ಶ್ರೀ.ಎಸ್ ಕೆ ಎಚ್ ವಕೀಲರು ಸಾಕ್ಷಿಯ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರುತ್ತಾರೆ. ಸಾಕ್ಷಿಯ ಪಾಟೀ ಸವಾಲಿಗಾಗಿ ಕಾಲಾವಕಾಶ ನೀಡಲು ಯಾವುದೇ ಸಕಾರಣಗಳು ನೀಡದೇ ಇರುವುದರಿಂದ, ಸದರಿ ವಕೀಲರ ಪ್ರಾರ್ಥನೆಯನ್ನು ತಿರಸ್ಕರಿಸಿ, 1ನೇ ಪ್ರತಿವಾದಿ ಪರ ಸಾಕ್ಷಿಯ ಪಾಟೀಸವಾಲನ್ನು ಇಲ್ಲಾ ಎಂದು ತೆಗೆದುಕೊಳ್ಳಲಾಯಿತು.)

<u>ಪಾಟೀ ಸವಾಲುಃ **2** ಮತ್ತು **3**ನೇ ಪ್ರತಿವಾದಿ ಪರ ಶ್ರೀ.ಜಿ ಬಿ ಸಿ ವಕೀಲರಿಂದಃ-</u>

1. ದಾವಾ ಸ್ವತ್ತುಗಳು ನಮ್ಮ ಹಿರಿಯರ ಆಸ್ತಿಗಳು ಎಂದರೆ ಸರಿ. ನನ್ನ ತಂದೆ ಮತ್ತು ನನ್ನ ಚಿಕ್ಕಪ್ಪ ಸೇರಿ ದಾವಾ ಸ್ವತ್ತುಗಳನ್ನು ನನ್ನ ಹೆಸರಿಗೆ ಮಾಡಿರುತ್ತಾರೆ. ಆ ಸಮಯದಲ್ಲಿ ನಾನು, ನನ್ನ ತಂದೆ ಮತ್ತು ನನ್ನ ಚಿಕ್ಕಪ್ಪ ಕೂಡಿಯೇ ಇದ್ದೆವು. ದಾವಾ ಸ್ವತ್ತುಗಳು ನನ್ನ ಹೆಸರಿಗೆ ವರ್ಗಾವಣೆಯಾದಾಗ ನನ್ನ ವಯಸ್ಸು 20 ವರ್ಷ ಇತ್ತು. ನನ್ನ ತಂದೆ ಮತ್ತು ಚಿಕ್ಕಪ್ಪ ದಿನಾಂಕ 03.09.2007 ರಂದು ಒಂದು ವಾಟ್ನಿ ಪತ್ರ ಮಾಡಿ, ಸದರಿ ವಾಟ್ನಿ ಪತ್ರದ ಮೂಲಕ ದಾವಾ ಸ್ವತ್ತುಗಳನ್ನು ನನಗೆ ಕೊಟ್ಟಿರುತ್ತಾರೆ ಎಂದರೆ ಸರಿ.

2. ಸದರಿ ವಾಟ್ನಿ ಪತ್ರದ ಪ್ರಕಾರ ನನ್ನ ಚಿಕ್ಕಪ್ಪನಾದ 2ನೇ ಪ್ರತಿವಾದಿಯ ಪಾಲಿಗೆ ಶಿರಗುಪ್ಪಿ ಗ್ರಾಮದ ಸರ್ವೆ ನಂ.153/3 ಕ್ಷೇತ್ರ 3 ಎಕರೆ, ಸರ್ವೆ ನಂ.152/3/1ಎ ಕ್ಷೇತ್ರ 17 ಗುಂಟೆ, ಸರ್ವೆ ನಂ.152/3/2ಬಿ ಕ್ಷೇತ್ರ 17 ಗುಂಟೆ, ಸರ್ವೆ ನಂ.152/3/2ಸಿ ಕ್ಷೇತ್ರ 17 ಗುಂಟೆ ಜಮೀನುಗಳು ಬಂದಿರುತ್ತವೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಪಾಲಿನಲ್ಲಿ ನನ್ನ ತಂದೆಯಾದ 1ನೇ ಪ್ರತಿವಾದಿಯ ಪಾಲಿಗೆ ಸರ್ವೆ ನಂ.157/4 ಕ್ಷೇತ್ರ 1 ಎಕರೆ 39 ಗುಂಟೆ ಜಮೀನು ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತುಗಳು ನನ್ನ ತಂದೆಯ ಪಾಲಿಗೆ ಬಂದಿದ್ದು, ಅವರು ನನ್ನ ಹೆಸರಿಗೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸರಕಾರಿ ಸೌಲಭ್ಯ ಪಡೆಯಲು ದಾವಾ ಸ್ವತ್ತುಗಳನ್ನು ನಾಮ ಮಾತ್ರವಾಗಿ ನನ್ನ ಹೆಸರಿಗೆ ಮಾಡಿದ್ದರು ಎಂದರೆ ಸರಿಯಲ್ಲ. ವಾಟ್ನಿ ಪತ್ರದ ಪ್ರಕಾರ ನಮ್ಮ ಹೆಸರುಗಳನ್ನು ನಮೂದು ಮಾಡಿ ಎಂದು ತಹಶೀಲ್ದಾರ ರವರಿಗೆ ಅರ್ಜಿ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಅರ್ಜಿಯ ಮೇಲೆ ನಾನು 3ನೇ ಅರ್ಜಿದಾರನಾಗಿ ಸಹಿ ಮಾಡಿರುತ್ತೇನೆ ಎಂದರೆ ಸರಿ. ಸದರಿ ವಾಟ್ನಿ ಪತ್ರದ ಮೇಲೆ ಸಹ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿ. ಸದರಿ ವಾಟ್ನಿ ಪತ್ರದ ಆಧಾರದ ಮೇಲೆ ತಹಶೀಲ್ದಾರರವರು ನಮ್ಮ ಹೆಸರುಗಳನ್ನು ಪಹಣಿ ಪತ್ರಿಕೆಗಳಲ್ಲಿ ನಮೂದು ಮಾಡಿರುತ್ತಾರೆ ಎಂದರೆ ಸರಿ. ಸದರಿ ಹೆಸರುಗಳನ್ನು ಎಂ.ಆರ್.ನಂ.44/2007 ಪ್ರಕಾರ ನಮೂದು ಮಾಡಲಾಗಿದೆ ಎಂದರೆ ಸರಿ. ನಾನು ದಾವಾ ಸ್ವತ್ತುಗಳಲ್ಲಿ ಸಾಗುವಳಿ ಮಾಡದೇ ಮಾರಾಟ ಮಾಡಲು ಸಿದ್ಧನಾಗಿದ್ದೆ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಸದರಿ ಪ್ರತಿವಾದಿಯರ ಪರ ವಕೀಲರು ಸಾಕ್ಷಿಯ ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರುತ್ತಾರೆ. ಆದ್ದರಿಂದ ಸಾಕ್ಷಿಯ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ. ಸರಿ ಅದೆ.

RAJASHEKHAR Digitally signed by RAJASHEKHAR Date: 2026.02.18 18:25:20 +0530

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಹಾಗೂ ಜೆ.ಎಮ್.ಎಫ್.ಸಿ. ಜಮಖಂಡಿ.